

# ಹೇಳದ ಮಾತುಗಳ ಭಾರ!

ನನ್ನ ತಂದೆಯವರು ಬಾಯಿಯ ಅರ್ಬುದ ರೋಗಗ್ರಸ್ಥರಾಗಿದ್ದ ಆ ದಿನಗಳು ನನ್ನ ಜೀವನದ ಅತ್ಯಂತ ಕರಾಳ ಅವಧಿ. ಅವರ ದೈಹಿಕ ನೋವನ್ನು ನೋಡಲಾಗದೆ ನಾನು ಮಾನಸಿಕವಾಗಿ ಕುಗ್ಗಿಹೋಗಿದ್ದೆ. ಆ ಒಂದು ಕ್ಷಣದ ಹತಾಶೆಯಲ್ಲಿ, ನಾನು ಅತಿ ಮೂರ್ಖತನದ ಮಾತುಗಳನ್ನಾಡಿದೆ. ಅವರ ಹಾಸಿಗೆಯ ಪಕ್ಕ ಕುಳಿತು, 'ಅಪ್ಪಾ, ನಿಮಗೆ ಇನ್ನೊಂದು ಆರು ತಿಂಗಳು ಮಾತ್ರ ಕಷ್ಟ ಇರಬಹುದು. ನಂತರ ಈ ನೋವು ಇರುವುದಿಲ್ಲ' ಎಂದು ಹೇಳಿಬಿಟ್ಟೆ.

ಅವರು ಏನನ್ನೂ ಮಾತನಾಡಲಿಲ್ಲ; ಅವರ ಕಣ್ಣುಗಳು ಕೇವಲ ನನ್ನನ್ನು ದಿಟ್ಟಿಸಿ ನೋಡಿದವು. ಆ ನೋಟದಲ್ಲಿ ನನ್ನ ಮಾತಿನ ಹಾನಿಕಾರಕ ಪರಿಣಾಮ ಎಷ್ಟು ಎಂದು ನನಗೆ ತಕ್ಷಣವೇ ಅರ್ಥವಾಯಿತು. ನನ್ನ ಮಾತು ಅವರನ್ನು ಹೇಗೆ ನೋಯಿಸಿರಬಹುದು ಎಂದು ನೆನೆದು, ನನಗೆ ನನ್ನ ಬಗ್ಗೆ ಅಸಹ್ಯ ಅನುಭವವಾಗಿ, ತೀವ್ರ ಪಶ್ಚಾತ್ತಾಪವಾಯಿತು.

ಅವರ ಬಳಿ ಹೋಗಿ ಕ್ಷಮೆ ಕೇಳುವ ಧೈರ್ಯ ನನ್ನಲ್ಲಿ ಬರಲೇ ಇಲ್ಲ. ಆ ಘಟನೆ ನಡೆದ ಆರು ತಿಂಗಳ ನಂತರ, ನಾನು ಹೇಳಿದಂತೆಯೇ, ಅವರು ವಿಧಿವಶರಾದರು. ಅವರ ಅಗಲಿಕೆಗಿಂತಲೂ ಹೆಚ್ಚಾಗಿ, ನನ್ನದೇ ಮಾತು ನಿಜವಾಯಿತು ಎಂಬ ಸತ್ಯವನ್ನು ಅರಗಿಸಿಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. ಆರು ತಿಂಗಳ ಆ ಸಂಪೂರ್ಣ ಅವಧಿಯಲ್ಲಿ, ಮತ್ತು ನಂತರ ಇಂದಿಗೂ, ನಾನು ಅವರಿಂದ ಕೇಳಬೇಕಾಗಿದ್ದ 'ನನ್ನನ್ನು ಕ್ಷಮಿಸಿ' ಎಂಬ ಮಾತು ನನ್ನಲ್ಲೇ ಉಳಿದುಹೋಯಿತು. ನನ್ನೊಳಗೆ ಒಂದು ಶಾಶ್ವತ ಗಾಯವಾಗಿ ಉಳಿದುಬಿಟ್ಟಿತು. ಆ ಕೊನೆಯ ಕ್ಷಮೆಗಾಗಿ ನಾನು ಸದಾ ಕಾಯುತ್ತಿದ್ದೇನೆ, ಆದರೆ ಕೇಳುವ ತಂದೆ ಇಂದು ನನ್ನೊಂದಿಗಿಲ್ಲ!

—ಎಸ್.ಎನ್. ಭಟ್, ಸೈಪಂಗಲ್ಲು

# ಉಳಿದುಹೋದ ಎದೆಯ ಮಾತು

ದಶಕಗಳ ಹಿಂದಿನ ಸಂಗತಿ. ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ನನ್ನ ಬಿ.ಎಸ್ಸಿ. ಕೋರ್ಸ್ ಮುಗಿದು ಮುಂದೇನು ಎಂಬ ಪ್ರಶ್ನೆ ಎಲ್ಲರನ್ನೂ ಕಾಡಿತ್ತು. ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ನನ್ನ ಐಚ್ಛಿಕ ವಿಷಯಗಳಾಗಿತ್ತು. ನನ್ನ ಕೆಲವು ಸಹಪಾಠಿಗಳು ಮುಂದೆ ಎಂ.ಎಸ್ಸಿ. ಮಾಡುವ ಯೋಚನೆಯಲ್ಲಿದ್ದರು. ಅವರ ಮಾತುಗಳನ್ನು ಕೇಳಿ, ನನಗೂ ಸಸ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಗಳಿಸುವ ಆಸೆ ಗರಿಗೆದರಿತ್ತು. ನಮ್ಮ ಕಾಲೇಜಿನಲ್ಲಿ ಸ್ನಾತಕೋತ್ತರ ವ್ಯಾಸಂಗದ ಸೌಲಭ್ಯವಿರಲಿಲ್ಲ. ಅದಕ್ಕಾಗಿ ಮೈಸೂರಿಗೆ ಹೋಗಬೇಕಾಗಿತ್ತು. ಮನೆಯಲ್ಲಿ ಅಪ್ಪ ಅಮ್ಮನನ್ನು ಒಪ್ಪಿಸಬೇಕಾಗಿತ್ತು. ಅಪ್ಪನಿಗೆ ನಿವೃತ್ತಿಯಾಗಿ, ನನ್ನ ಹಿರಿಯ ಸಹೋದರ ಸಂಸಾರದ ಚುಕ್ಕಾಣಿಯನ್ನು ಹಿಡಿದಿದ್ದ. ಆರು ಜನರ ಕುಟುಂಬ ನಮ್ಮದು.

ಅದೊಂದು ದಿನ ನಾನು ನನ್ನ ಬೇಡಿಕೆ, ಆಶಯಗಳನ್ನು ಅಪ್ಪ ಅಮ್ಮಂದಿರ ಮುಂದಿಡಲು ಅವರ ರೂಮಿನ ಬಾಗಿಲಿಗೆ ಬರುವಷ್ಟರಲ್ಲಿ, ಒಳಗಿನಿಂದ ಅಮ್ಮ ಮತ್ತು ಸಹೋದರನ ಮಾತುಗಳು ನನ್ನ ಕಿವಿಗೆ ಬಿದ್ದವು.

'ಇನ್ನು ನಿನ್ನದೇ ಜವಾಬ್ದಾರಿ. ದೊಡ್ಡ ಸಂಸಾರ ನಿನಗೂ ಕಷ್ಟವೇ, ಅವಳು ಓದಿದ್ದು ಸಾಕು, ಸರಿಯಾದ ಸಂಬಂಧ ಕಂಡುಬಂದರೆ ಮದುವೆ ಮಾಡಿಬಿಡುವಾ'. ಅಣ್ಣ ಮಾತನಾಡಿದ, 'ಹೌದು, ಅವಳು ಮುಂದೆ ಓದುವ ಆಸೆಯನ್ನು ನನಗೂ ಹೇಳಿದ್ದಳು. ಆದರೆ ನನಗೂ ಆಗಬೇಕಲ್ಲ, ಅವಳು ಎಲ್ಲಾದರೂ ಕೆಲಸಕ್ಕೆ ಪ್ರಯತ್ನಿಸಿದರೆ ಒಳ್ಳೆಯದು...' ನಾನು ಹೇಳಲಿದ್ದ ಮಾತುಗಳು ನನ್ನಲ್ಲೇ ಉಳಿದುಹೋದವು.

—ಪ್ರಭಾ ಪ್ರಸಾದ್, ಬೆಂಗಳೂರು



## ಬಟವಾಡೆಯಾಗದ ಪ್ರೇಮಪತ್ರ

'ಸೋಲುವುದೇ ಪ್ರೀತಿಯಲ್ಲಿ ಗೆಲುವು' ಎಂಬ ಮಾತಿದೆ. ಪ್ರೇಮಿಗಳ ನಡುವೆ ವಿನಿಮಯವಾಗುವ ಕಣ್ಣ ನೋಟಗಳು, ತುಟಿಯಂಚಿನಲ್ಲಿ ಕಾಣಿಸಿಕೊಳ್ಳುವ ಮುಗುಳುನಗು, ನವಿರಾದ ಭಾವಗಳು ಎದೆಯಲ್ಲಿ ಪ್ರೀತಿಯ ದೀಪ ಹೊತ್ತಿಸುವ ರಾಯಭಾರಿಗಳು. ತಾವು ಇಷ್ಟಪಟ್ಟವರಿಗೆ, ಪ್ರೀತಿಸಿದವರಿಗೆ ತಮ್ಮ ಪ್ರೀತಿಯನ್ನು ನಿವೇದನೆ ಮಾಡಿಕೊಳ್ಳಲು, ತಮ್ಮ ಹೃದಯದ ಪಿಸುಮಾತುಗಳನ್ನು ದಾಟಿಸಲು ಪ್ರೇಮಪತ್ರವೆಂಬ ಮಾಧ್ಯಮ ಎಲ್ಲ ಕಾಲಕ್ಕೂ ಪ್ರಸ್ತುತವೇ. ಆದರೆ ಎಷ್ಟೋ ಬಾರಿ ತಮ್ಮ ಪ್ರೀತಿಯನ್ನು ನಿವೇದಿಸಿಕೊಳ್ಳಲು ಸಾಧ್ಯವಾಗದ ಸಂದರ್ಭಗಳೇ ಹೆಚ್ಚಾಗಿರುತ್ತವೆ. ತಮ್ಮ ಮನದ ಮಾತುಗಳನ್ನು ತೆರೆದಿಡಲು ಪ್ರೇಮಪತ್ರವನ್ನು ಬರೆದಿದ್ದರೂ ಅದನ್ನು ನೀಡಲಾಗದೇ ಹಾಗೆಯೇ ಪ್ರೀತಿಯ ಕನಸೊಂದು ಮನದಲ್ಲೇ ಉಳಿದು ಹೋಗುವುದೂ ಉಂಟು. ನಿಮ್ಮ ಜೀವನದಲ್ಲಿಯೂ ಅಂಥ ಸನ್ನಿವೇಶ ನಡೆದಿದ್ದರೆ, ಬರೆದ ಪ್ರೇಮಪತ್ರವೊಂದು ಬಟವಾಡೆಯಾಗದೆ ಉಳಿದಿದ್ದರೆ, ಆ ಸಂಗತಿಯನ್ನು 'ಸುಧಾ'ದೊಂದಿಗೆ ಹಂಚಿಕೊಳ್ಳಬಹುದು. ಬರಹ 150ರ ಪದಮಿತಿಯಲ್ಲಿರಲಿ. ಕೊನೆಯ ದಿನಾಂಕ ಫೆಬ್ರುವರಿ 15. ಲೇಖನವನ್ನು ನುಡಿ ಅಥವಾ ಯುನಿಕೋಡ್‌ನಲ್ಲಿ editorsu@sudha.co.inಗೆ ಇಮೇಲ್ ಮಾಡಿ.